ಶ್ಯಾನುಭೋಗರು ಪಟೇಲರನ್ನು ಮತ್ತೆ ಇಟ್ಟುಕೊಳ್ಳುವ ಒಂದು ತೀವ್ರವಾದ ಪರಿಶೀಲನೆಯನ್ನು ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ:– ಮಾನ್ಯ ಅಧ್ಯಕ್ಷರೇ, ಅದು ಸೆಪರೇಟ್ ಪ್ರಶ್ನೆ. ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಆ ಪ್ರಶ್ನೆಯನ್ನು ಟೇಬಲ್ ಮಾಡಿದ್ದಾರೆ. ಅದು ಬಂದಾಗ ಈ ಪ್ರಶ್ನೆಯನ್ನು ಅವರು ಕೇಳಬಹುದು.

ಶ್ರೀ ಎಂ. ಪಿ. ವೆಂಕಟೇಶ್:– ಈ ರೀತಿ ಷಾಮಿರ ಜನರು ಇರಬಹುದು. ಈಗ ಎಷ್ಟೋ ಜನ ತೀರಿ ಹೋಗಿದ್ದಾರೆ. ಮಾನ್ಯ ಕಂದಾಯ ಮಂತ್ರಿಗಳು ಶಿಫಾರಸ್ಸು ಮಾಡಿದ್ದೇನೆ ಎಂದು ಹೇಳಿದ್ದರು. ಮಂತ್ರಿಮಂಡಲದಲ್ಲಿ ಕೂಡಲೇ ಇದನ್ನು ಅಪ್ರೂವ್ ಮಾಡಿಸಿಕೊಟ್ಟರೆ ಬಹಳಷ್ಟು ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಪಟೇಲರ ಬಗ್ಗೆ ಹೆಸರು ಇದೆಯಲ್ಲಾ ಬಹಳ ದೊಡ್ಡ ಹೆಸರಿನ ರೀತಿ ಒಂದು ಇದೆ. ಅವತ್ತು ಯಜಮಾನಿಕೆ ಮಾಡಿ ಊರಿನ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದ. ಕಂದಾಯ ಸಂಗ್ರಹ ಮಾಡುತ್ತಿದ್ದ. ಈಗ ಇರುವ ವಿಲೇಜ್ ಅಕೌಂಟೆಂಟ್ ರೆವಿನ್ಯೂ ಇನ್ಸ್‌ಪೆಕ್ಟರ್ ವ್ಯವಸ್ಥೆಗೆ ಅದನ್ನು ಹೋಲಿಸಿದರೆ ಸಾಮಿರ ಪಾಲು ಉತ್ತಮ ಇತ್ತು. ತುಂಬಾ ಒಳ್ಳೆಯ ಸೇವೆಯನ್ನು ಅವರು ಮಾಡಿದ್ದಾರೆ. ಅನೇಕ ವರ್ಷಗಳಿಂದ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ಪಟೇಲರಿಗೆ ಮಾಸಾಶನ ಕೊಡಬೇಕು ಎನ್ನುವ ದೃಷ್ಟಿಯಿಂದ ತಾವು ಅದನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳುತ್ತೀರಿ. ದಯಮಾಡಿ ಆದಷ್ಟು ಬೇಗ ಬಜೆಟ್ ಮುಗಿಯುವುದರೊಳಗೆ ನಿಮ್ಮ ಇಲಾಖೆ ಬೇಡಿಕೆಗೆ ಉತ್ತರ ಕೊಡುವುದರೊಳಗಾಗಿ ಇದನ್ನು ಕಾರ್ಯರೂಪಕ್ಕೆ ತಂದು ತಿಂಗಳಿಗೆ 500 ರೂಪಾಯಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

Sri M. Rajashekara Murthy:- I am more serious than the Hon'ble Member.

ಖಾತೆಗಳನ್ನು ಬದಲಾವಣೆ ಮಾಡುವಾಗ ರೈತರಿಗೆ ಕಿರುಕುಳ.

333 (1868): ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರೈತರ ಭೂಮಿಯ ಖಾತೆಗಳನ್ನು ಬದಲಾವಣೆ ಮಾಡುವಾಗ ರೈತರಿಗೆ ಆಗುತ್ತಿರುವ ಕಿರುಕುಳಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಈ ಕಿರುಕುಳಗಳನ್ನು ತಪ್ಪಿಸಲು ಕಾರ್ಯಕ್ರಮಗಳೇನಾದರೂ ಇದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು.

ಆ. 1. ಗ್ರಾಮ ಸಭೆ, ದಫ್ತರ್ ತಪಾಸಣೆ ಕಂದಾಯ ಅಧಿಕಾರಿಗಳ ಸಭೆಗಳಲ್ಲಿ ಹಕ್ಕು ಬದಲಾವಣೆ ಪ್ರಕರಣಗಳ ವಿಲೇವಾರಿ ಬಗ್ಗೆ ಪರಾಮರ್ಶೆ (ರಿವ್ಯೂ) ಮಾಡಲಾಗುತ್ತಿದೆ.

2. ಇದರ ಜೊತೆಗೆ ಭೂಮಿಯ ಮಾಲೀಕತ್ವದ ಹಕ್ಕು ಬದಲಾವಣೆ ಅಧಿಕಾರವನ್ನು ರಾಜಸ್ವ ನಿರೀಕ್ಷಕರಿಂದ ತೆಗೆದು ತಹಸೀಲ್ದಾರ್‌ರವರಿಗೆ ನೀಡುವ ಬಗ್ಗೆ ಭೂ ಕಂದಾಯ ನಿಯಮಗಳ ತಿದ್ದುಪಡಿಯ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಅಧ್ಯಕ್ಷರೇ, ಈ ಹಳ್ಳಿಗಳಲ್ಲಿ ನಿಜವಾಗಿಯೂ ತೊಂದರೆಯಾಗುತ್ತಿರುವಂಥಾದ್ದು ಈ ಖಾತಾ ಬದಲಾವಣೆಯಲ್ಲಿ. ನನಗಂತೂ ಸಂಪೂರ್ಣವಾಗಿ ನಮ್ಮ ಇಡೀ ಸದನದಲ್ಲಿ ನಿಮ್ಮ ಒಂದು ಕಾರ್ಯದಕ್ಷತೆ ಬಗ್ಗೆ ಬಹಳ ಅಭಿಮಾನ ಇದೆ. ತಾವು ಇದನ್ನು ಹೇಳಿದ್ದೀರಿ, ಗ್ರಾಮಸಭೆ ದಫ್ತರ್ ತಪಾಸಣೆ, ಕಂದಾಯ ಅಧಿಕಾರಿಗಳ ಸಭೆ ನಡೆಯುವುದೇ ಇಲ್ಲ ಸ್ವಾಮಿ. ತಮಗೆ ಗೊತ್ತಿದೆ. ಸುಮ್ಮನೆ ಹೇಳಿಕೊಳ್ಳತಕ್ಕಂಥದ್ದು ಇಷ್ಟೇ ಹೊರತು ಕಂದಾಯ ಸಭೆಗಳನ್ನು ನಡೆಸುವುದಕ್ಕಾಗುವುದಿಲ್ಲ. ನಾವೂ ಹೇಳುತ್ತೇವೆ, ಅದೇನು ನಮ್ಮ ರೈತರಲ್ಲಿ ಏನೋ ಒಂದು ತಪ್ಪಿರುತ್ತದೆ ಎಂದರೆ ಯಾವುದೋ ಒಂದು ಸಣ್ಣ ಲ್ಯಾಕೂನಾ ಇರುತ್ತದೆ. ಅದನ್ನು ಮಾಡುವುದಕ್ಕೆ ಎರಡು–ಮೂರು ಸಾವಿರ ರೂಪಾಯಿ ತೆಗೆದುಕೊಂಡು ಹೋಗಿ ಕೊಟ್ಟುಬಿಡುತ್ತಾರೆ. ಹೀಗಾಗಿ ಬಿಳಿಯದು ಕರಿಯದು, ಕರೀದು ಬಿಳೀದು ಆಗುತ್ತಿದೆ. ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ನಾನು ಹೇಳತಕ್ಕಂಥದ್ದು ಈಗ ಇದಕ್ಕೆ ಏನಾದರೂ ಇಡೀ ರಾಜ್ಯದಲ್ಲಿ ವಿಶೇಷವಾದ ಡ್ರೈವನ್ನು ಮಾಡಿ ಒಂದು ತಿಂಗಳು ಇದನ್ನೇ ಮಾಡುತ್ತೇವೆ ಎಂದು ಹೇಳಿ; ಈ ಆಶ್ರಯದಲ್ಲಿ ಬಡವರಿಗೆ ಯಾವ ರೀತಿ ಸೈಟು ಹಂಚಿತಕ್ಕಂಥ ಕಾರ್ಯಕ್ರಮವನ್ನು ತೆಗೆದುಕೊಂಡು ಒಳ್ಳೆಯ ಹೆಸರು ಸರ್ಕಾರಕ್ಕೆ ಬಂತು. ಆ ರೀತಿಯಲ್ಲಿ ತಮ್ಮ ಕಂದಾಯ ಇಲಾಖೆಯಿಂದ ಒಂದು ತಿಂಗಳು ಕಾಲ ಇಡೀ ರಾಜ್ಯದಲ್ಲಿ ಒಂದು ಡ್ರೈವನ್ನು ಮಾಡಿ ಶಾಸಕರುಗಳ ಮೂಲಕ ಅಥವಾ ನಮ್ಮ ಜನ ಪ್ರತಿನಿಧಿಗಳ ಮೂಲಕ ಇದನ್ನು ಹಂಚಿಸತಕ್ಕಂಥ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ವಿಲೇಜ್ ಅಕೌಂಟೆಂಟ್‌ಗಳು, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಬಹಳ ತೊಂದರೆ ಕೊಡುತ್ತಿದ್ದಾರೆ. ಅದನ್ನು ಹೇಳಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ಲಂಚ ತಡೆಗಟ್ಟುವುದಕ್ಕೆ ಇನ್ನೂ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ?

ಶ್ರೀ ಎಂ. ರಾಜಶೇಖರಮೂರ್ತಿ:– ಮಾನ್ಯ ಅಧ್ಯಕ್ಷರೇ, ಆರ್.ಟಿ.ಸಿ. ಕೊಡತಕ್ಕಂಥದ್ದು, ಖಾತೆ ಬದಲಾವಣೆ ಮಾಡತಕ್ಕಂಥದ್ದು ಮತ್ತು ಬೇರೆ ಸರ್ಟಿಫಿಕೇಟುಗಳನ್ನು ಕೊಡತಕ್ಕಂಥದ್ದು ಇದು ಒನ್ ಟೈಮ್ ಜಾಬಲ್ಲ. It is a continuous affiar, ಈಗ ಇವರೇನು ಡ್ರೈವ್ ಮಾಡಬೇಕು ಎಂದು ಹೇಳಿದರು, ಡ್ರೈವ್ ಮಾಡಿ ಮುಗಿದರೆ ಆ ಕೆಲಸ ಮುಗಿಯಿತು ಎಂದಲ್ಲ. ಅದರಿಂದ ಅನುಕೂಲವಾಗುವುದಿಲ್ಲ. ಈಗ ವಿಲೇಜ್ ಅಕೌಂಟೆಂಟ್‌ಗಳು ರೈತರುಗಳಿಗೆ ನಾನಾ ತರಹದ ಕಿರುಕುಳ ಕೊಡತಕ್ಕಂಥದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ನಾನು ಹಳ್ಳಿಯಿಂದ ಬಂದವನು. ಅವರು ಏನೇನು ತೊಂದರೆ ಕೊಡುತ್ತಿದ್ದಾರೆ ಎಂದು ಗೊತ್ತಿದೆ. ನಾನು ಎಲ್ಲಾ ಕಡೆ ಹೋದಾಗಲೆಲ್ಲಾ ಆಫೀಸರ್ಸ್ ಮೀಟಿಂಗ್ ಮಾಡಿದಾಗೆಲ್ಲಾ ವಿಲೇಜ್ ಅಕೌಂಟೆಂಟ್ ಮೇಲೆ ಏನಾದರೂ ಕಂಪ್ಲೇಂಟ್ ಕೊಟ್ಟರೆ ಇಮ್ಮೀಡಿಯೇಟ್ ಆಗಿ ಏನ್‌ಕ್ವೈರಿ ಮಾಡಿ ಅವರನ್ನು ಸಸ್ಪೆಂಡ್ ಮಾಡಿ ಎಂದು ಹೇಳುತ್ತಿದ್ದೇನೆ. ಜೊತೆಗೆ ನಾನು ಒಂದು ಸಲಹೆ ಏನು ಕೊಟ್ಟಿದ್ದೇನೆ ಹೋದ ಕಡೆಗೆಲ್ಲಾ ಎಂದರೆ ಎಂ. ಎಲ್. ಎ. ಗಳನ್ನು ಜೊತೆಗೆ ಇಟ್ಟುಕೊಂಡು ಗ್ರಾಮ ಸಂದರ್ಶನ ಎಂದು ಒಂದು ಮಾಡಿ.

ಆ ಗ್ರಾಮಕ್ಕೆ ಸಂಬಂಧಪಟ್ಟಿದ್ದು ಏನೇನು ಇದೆ, ಅಲ್ಲೇ ಅದು ತೀರ್ಮಾನ ಆಗಬೇಕು. On the spot, decision should be taken, ನನ್ನದೇ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಹಿಂದೆ ಕೆಲವು ಸಾರಿ ಮಾಡಿದ್ದರು. ಅದನ್ನ ಈಗ ಬಿಟ್ಟುಬಿಟ್ಟಿದ್ದಾರೆ. ಮತ್ತೆ ಗ್ರಾಮ ಸಂದರ್ಶನ ರಿವೈವ್ ಮಾಡಬೇಕು ಎಂದು ಹೇಳಿದ್ದೇವೆ. ಅದಕ್ಕೆ ಎಂಎಲ್‌ಎಗಳು ಕೂಡ ಕೋ-ಆಪರೇಟ್ ಮಾಡಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್:– ಒಂದು ಆದೇಶ ಸಭೆ.

ಶ್ರೀ ಎಂ. ರಾಜಶೇಖರ ಮೂರ್ತಿ:– ಅದನ್ನು ಮಾಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ನಾನು ಮಂತ್ರಿಗಳಿಗೆ ಹೇಳತಕ್ಕದ್ದು ಇಷ್ಟೇನೇ. ಗ್ರಾಮ ಸಂದರ್ಶನದ ಮೂಲಕ ಇದನ್ನು ಸ್ವಲ್ಪಮಟ್ಟಿಗೆ ರೆಡ್ಯೂಸ್ ಮಾಡುವುದಕ್ಕೆ ಖಂಡಿತ ಸಾಧ್ಯ ಇದೆ. ವಾರದಲ್ಲಿ ಒಂದು ದಿವಸ ಶಾಸಕರ ಜೊತೆಯಲ್ಲಿ ತಹಶೀಲ್ದಾರ್ ಅಂದರೆ ತಿಂಗಳಿಗೆ ನಾಲ್ಕು ದಿನ ಮಾಡುವುದಕ್ಕೆ ಸಾಧ್ಯನಾ ? ಕೊನೆಯ ಪಕ್ಷ ವಾರದಲ್ಲಿ ಒಂದು ದಿವಸ ಅವರು ನಮ್ಮ ಜೊತೆ ಬರಲಿ. ಆಟ್‌ಲೀಸ್ಟ್ ಒಂದು ಟ್ವೆಂಟಿ ವಿಲೇಜಸ್ ಎಂದು ಹೇಳಿದರೆ ಒಂದು ತಿಂಗಳಿಗೆ ನಾವು 80 ವಿಲೇಜ್‌ಗಳನ್ನು ವಿಸಿಟ್ ಮಾಡಬಹುದು. ಅಲ್ಲಾದರೂ ನಾವು ಪ್ರಾಬ್ಲಮ್‌ಗಳನ್ನು ಸಾಲ್ವ್ ಮಾಡುವುದಕ್ಕೆ ಸಾಧ್ಯ ಇದೆ. ಇದನ್ನು ತಾವು ಮಾಡಬಹುದು. ಆದೇಶ ಹೊರಡಿಸಲಿಕ್ಕೆ ಸಾಧ್ಯವೇ ?

ಶ್ರೀ ಎಂ. ರಾಜಶೇಖರಮೂರ್ತಿ:– ಅದನ್ನು ಮಾಡುತ್ತೇನೆ. ನಾನು ಸೀರಿಯಸ್ ಆಗಿ ಯಾವ ರೂಪದಲ್ಲಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇನೆ. ತೋದರೆ ಎಲ್ಲಿವೆ ಅದನ್ನು ಮಾಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗ ಏನು ಖಾತೆ ಬದಲಾವಣೆ ವಿಲೇವಾರಿ ಬಗ್ಗೆ ಹೇಳಿದ್ದಾರೆ. ಅದಕ್ಕೆ ನಾನು ಮತ್ತೊಂದು ಮಾತನ್ನು ಕೇಳುತ್ತೇನೆ. ಏನು ಈ ಒಂದು ಕಿರುಕುಳವನ್ನು ತಪ್ಪಿಸಬೇಕಾದರೆ ಒಂದು ಗೊತ್ತಾದ ಕಾಲದಲ್ಲಿ ಈ ಒಂದು ಅರ್ಜಿಗಳನ್ನು ವಿಲೇವಾರಿ ಮಾಡಲಿಕ್ಕೆ ಸರ್ಕಾರ ಆದೇಶ ಕೊಡಲಿಕ್ಕೆ ಸಾಧ್ಯ ಇದೆಯೇ ? ತಾವು ಮೊನ್ನೆಯ ದಿವಸ ನೂರು ದಿನಗಳ ಕಾರ್ಯಕ್ರಮದಲ್ಲಿ ಒಂದು ಮಾತನ್ನು ಹೇಳಿದಿರಿ. ಏನು ಎಂದರೆ ಯಾವುದೇ ಅಧಿಕಾರಿ 15 ದಿವಸದೊಳಗಾಗಿ ಈ ಫೈಲನ್ನು ವಿಲೇವಾರಿ ಮಾಡಬೇಕು; ಇಲ್ಲದೇ ಹೋದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು. ಹಾಗೆ ಒಂದು ಗೊತ್ತಾದಂತಹ ಕಾಲವನ್ನು ನಿಗದಿ ಮಾಡಿ.

15 ದಿವಸ ಅಲ್ಲ, ಒಂದು ತಿಂಗಳು ಮಾಡಿ. ನಾನು ಅರ್ಜಿಯನ್ನು ಖಾತೆ ಬದಲಾವಣೆಗೆ ಕೊಟ್ಟರೆ ಅದು ಆಗಬೇಕು. ಅಂತಹುದ್ದು ಆಗದೇ ಇದ್ದರೆ ತಾವು ಕ್ರಮ ತೆಗೆದುಕೊಳ್ಳುವಂತಹ ಪ್ರವೃತ್ತಿ ತೋರಿದರೆ ಖಂಡಿತವಾಗಿಯೂ ಆಗುತ್ತದೆ. ಅಂತಹ ಒಂದು ಕಾಲ ಮಿತಿಯನ್ನು ಏನಾದರೂ ತಾವು ಗೊತ್ತು ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ:– ಕಾಲಮಿತಿ ಗೊತ್ತು ಮಾಡಿ ಹಿಂದೆ ಎಲ್ಲಾ ಸರ್ಕ್ಯುಲರ್ ಕೊಟ್ಟಿದ್ದಾರೆ. ಆ ಸರ್ಕ್ಯುಲರ್ ಪ್ರಕಾರ ಕೆಲಸ ಮಾಡುತ್ತಿಲ್ಲ. ರೆವಿನ್ಯೂ ಅಡ್ಮಿನಿಸ್ಟ್ರೇಷನ್‌ನಲ್ಲಿ ಎಲ್ಲಿ ಮಿಸ್ಟೇಕ್ ಇದೆ ಎಂದರೆ ಕೆಳಗಡೆ ಇರತಕ್ಕ ಅಧಿಕಾರಿ ತಪ್ಪು ಮಾಡಿದಾಗ ತಪ್ಪು ಮಾಡಿದ್ದೇವೆ ಎಂದು ಬಿಟ್ಟು ಅವರು ಏನಾದರೂ ರೈತರು ತಹಶೀಲ್ದಾರ್‌ರವರಿಗೆ ಬಂದು ಕಂಪ್ಲೈಂಟ್ ಕೊಟ್ಟಾಗ, ಅವರು ಹೋಗಿ ಇನ್ಸ್‌ಪೆಕ್ಷನ್ ಮಾಡುವುದಿಲ್ಲ. ಅಥವಾ ತಹಶೀಲ್ದಾರ್ ತಪ್ಪು ಮಾಡಿದ್ದಾರೆ ಎಂದು ಮೇಲ್ಕಡೆ ಕೊಟ್ಟಾಗ ಅಸಿಸ್ಟೆಂಟ್ ಕಮೀಷನರ್‌ರವರು ತಹಶೀಲ್ದಾರ್‌ರವರ ಆಫೀಸ್ ಇನ್ಸ್‌ಪೆಕ್ಷನ್ ಮಾಡುವುದಿಲ್ಲ. ಅಥವಾ ಇವರು ಮೂರು ಜನ ತಪ್ಪು ಮಾಡಿದ್ದಾರೆ ಎಂದು ಡೆಪ್ಯುಟಿ ಕಮೀಷನರ್‌ಗೆ ಕಂಪ್ಲೈಂಟ್ ಕೊಟ್ಟಾಗ ಡೆಪ್ಯುಟಿ ಕಮೀಷನರ್‌ರವರು ಹೋಗಿ ತನಿಖೆ ಮಾಡುವುದಿಲ್ಲ. ಮತ್ತು ಅವರು ಪ್ರತಿ ತಿಂಗಳಲ್ಲಿ ಹತ್ತು ದಿವಸವಾದರೂ ಟೂರ್ ಮಾಡಬೇಕೆಂದು ಇದೆ. ಒಂದು ಏರಡು ಮೂರು ದಿವಸವಾದರೂ ಹಳ್ಳಿಯಲ್ಲಿ ಹಾಲ್ಟ್ ಮಾಡಬೇಕು ಎಂದು ಇದೆ. ಹಳೆಯ ಕಾಲದಲ್ಲಿ ಜಮಾಬಂದಿ ಎಂದು ಇತ್ತು. ಆಲ್ಲಿ ಸ್ಕೂಲಿನಲ್ಲಿ ಬಂದು ತಹಶೀಲ್ದಾರರು ಹಾಗೂ ಡೆಪ್ಯುಟಿ ಕಮೀಷನರ್ ಮಲಗುತ್ತಿದ್ದರು. ಆ ಒಳ್ಳೆಯ ಕಾಲಗಳನ್ನು ಈಗ ನಾವು ಕಣ್ಣಲ್ಲಿ ನೋಡುತ್ತಿಲ್ಲ. ಇದನ್ನು ಯಾವ ರೀತಿ ರೀ-ಆರ್ಗನೈಸ್ ಮಾಡಬೇಕು ಮತ್ತು ಯಾವುದು ಸ್ಕೀಮ್ ಕೊಡಬೇಕು ಏಂದು ಗ್ರಾಮ ಸಂದರ್ಶನದಲ್ಲಿ ಇದೆಯೋ ಅದನ್ನು ನಾನು ಸೀರಿಯಸ್ ಆಗಿ ಯೋಚನೆ ಮಾಡುತ್ತಿದ್ದೇನೆ. ಅದನ್ನು ತಪ್ಪಿಸಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಅದಕ್ಕೆ ನಿಮ್ಮ ಸಹಕಾರ ಬೇಕಾಗುತ್ತದೆ.

ಶ್ರೀ ಅಂಜನಮೂರ್ತಿ:– ವಿಲೇಜ್ ಅಕೌಂಟೆಂಟ್‌ಗಳು ಬೆಂಗಳೂರಿನಲ್ಲಿ ವಾಸವಾಗಿದ್ದು ವಾರಕ್ಕೆ

ಅಥವಾ 15 ದಿವಸ ಅಥವಾ ಒಂದು ತಿಂಗಳಿಗೆ ಒಂದು ಸಾರಿ ಗ್ರಾಮಗಳಿಗೆ ಹೋಗುತ್ತಾರೆ. ಇದರ ಮಧ್ಯೆ ರೈತಾಪಿ ವರ್ಗದವರಿಗೆ ಅವರು ಇರುವ ಜಾಗ ಹುಡುಕಿಕೊಂಡು ಹೋಗಿ ಬರುವುದಕ್ಕೆ ಆಗುವುದಿಲ್ಲ. ಪಾಂಕ್ಕೆ 15 ದಿವಸಕ್ಕೆ ಹೋದರೆ ತಿರುಗಿ ಐದು ನೂರು ಅಥವಾ ಆರು ನೂರು, ಸಾವಿರ ರೂಪಾಯಿ ಈ ರೀತಿ ಡಿಮ್ಯಾಂಡ್ ಮಾಡುತ್ತಿದ್ದಾರೆ. ಆದ್ದರಿಂದ ಕಟ್ಟುನಿಟ್ಟಾಗಿ ವಿಲೇಜ್ ಅಕೌಂಟೆಂಟ್‌ಗಳು ಆ ಗ್ರಾಮದಲ್ಲಿ ಅಥವಾ ಆ ಪಂಚಾಯತಿಯಲ್ಲಿ ವಾಸ ಮಾಡುವುದಕ್ಕೆ ಅವರಿಗೆ ಒಂದು ವಸತಿ ಸೌಕರ್ಯ ಒದಗಿಸಿಕೊಡುವುದಾಗಲಿ ಅಥವಾ, ಯಾವುದಾದರೂ ಬಾಡಿಗೆ ರೂಪದಲ್ಲಿ ವಸತಿ ಸೌಕರ್ಯ ಒದಗಿಸಿಕೊಟ್ಟರೆ ಖಂಡಿತವಾಗಿ ಆದಷ್ಟು ರೈತಾಪಿ ವರ್ಗದವರಿಗೆ ಆಗತಕ್ಕ ತೊಂದರೆ ತಪ್ಪುತ್ತದೆ. ಸರ್ಕಾರ ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ರಾಜಶೇಖರಮೂರ್ತಿ:– ಅವರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಅವರು ಮಾಡುವ ಕೆಲಸ ನೋಡಿದರೆ ಅವರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡಬೇಕು ಎಂದು ಯಾರಿಗೂ ಕೂಡ ಮನಸ್ಸು ಬರುವುದಿಲ್ಲ.

ನೆರೆ ಹಾವಳಿಗಾಗಿ ಬೆಳಗಾಂ ಜಿಲ್ಲೆಗೆ ನೀಡಿರುವ ನೆರವಿನ ಬಗ್ಗೆ.

334 (1754): ಶ್ರೀ ಬಿ. ಐ. ಪಾಟೀಲ್ (ಉಚ್ಚಗಾಂವ್):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕಳೆದು ವರ್ಷ ನೆರೆ ಹಾವಳಿಗಾಗಿ ರಾಜ್ಯ ಸರ್ಕಾರವು ಬೆಳಗಾಂ ಜಿಲ್ಲೆಗೆ ಬಿಡುಗಡೆ ಮಾಡಿರುವ ಹಣವೆಷ್ಟು;

ಆ. ಉಚ್ಚಗಾಂವ್ ವಿಧಾನ ಸಭಾ ಕ್ಷೇತ್ರದಲ್ಲಿ ಖರ್ಚು ಮಾಡಿರುವ ಹಣವೆಷ್ಟು;

ಇ. ನೆರೆ ಹಾವಳಿ ಪರಿಹಾರ ಕಾರ್ಯಕ್ರಮದಡಿ ಯಾವ ಕಾಮಗಾರಿಗಳನ್ನು ಕೈಗೊಂಡಿದೆ;

ಈ. ಈ ಕೆಲಸಗಳ ಪ್ರಗತಿಯು ಯಾವ ಹಂತದಲ್ಲಿರುತ್ತದೆ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು):–

ಅ. ರೂ. 122.00 ಲಕ್ಷಗಳು.

ಆ. ಉಚ್ಚಗಾಂವ್ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳ ಕಾಮಗಾರಿಗಳಿಗೆ 1991-92ರಲ್ಲಿ ರೂ. 4.38 ಲಕ್ಷಗಳನ್ನು ಖರ್ಚು ಮಾಡಿದೆ.

ಇ. ರಸ್ತೆಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಂಡಿದೆ.

ಈ. ಉಚ್ಚಗಾಂವ್ ವಿಧಾನಸಭಾ ಕ್ಷೇತ್ರದಲ್ಲಿ ದುರಸ್ತಿಗಾಗಿ ಕೈಗೊಂಡಿರುವ ಒಟ್ಟಾ 12 ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

Sri B. I. Patil:- Speaker Sir, out of Rs. 120 lakhs released to Belgaum District, the Government has spent only Rs. 5.38 lakhs on road works in Uchagaon Constituency. What is the reason for such meagre allocation for Uchagaon Constituency? Every year there wil be heavy rain. The roads and bridges get damaged every year. The second question which I would like